ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶನಿವಾರ ೭ನೇ ಜುಲೈ ೧೯೯೦ ಆಷಾಢ ೧೬, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧—೨೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ ಅವರು) ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರ ತೀರ್ಪು

ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸಿದ ಪ್ರತಿಭಟನೆ ಕುರಿತು.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳೇ, ಮೊನ್ನೆ ನಡೆದ ದುರದೃಷ್ಟಕರ ಪಾದಂಥ ಬೆಳವಣಿಗೆಯ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಕೂಡಾ ನಿನ್ನೆ ತಮ್ಮ ಪ್ರತಿಭಟನೆಯನ್ನು, ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕಾಗಿ ಸಭೆಗೆ ಬಾರದೆ ಈ ಸಭೆ ಶೋಭಾಯಮಾನವಾಗಿರಲಿಲ್ಲ. ಈ ದಿವಸ ಸಭೆ ಪೂರ್ಣವಾಗಿರತಕ್ಕಂಥದ್ದು ನನಗೆ ವೈಯಕ್ತಿಕವಾಗಿ ಬಹಳ ಸಂತೋಷವನ್ನು ಉಂಟುಮಾಡಿದೆ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಪಾತ್ರವನ್ನು ನಾನು ಎಂತೆ ಒತ್ತು ಕೊಟ್ಟು ಹೇಳತಕ್ಕಂಥ ಅವಶ್ಯಕತೆ ಇಲ್ಲ. ವಿರೋಧ ಪಕ್ಷಗಳು ಸಕ್ರಿಯವಾದಂಥ ಪಾತ್ರವನ್ನು ಚರ್ಚೆಗಳಲ್ಲಿ ವಹಿಸಬೇಕಾಗುತ್ತದೆ. ಕೆಲವೊಂದು ಸಾರಿ ವಿರೋಧ ಪಕ್ಷದ ಸದಸ್ಯರು ನಿಯಮಿತ ಸಮಯಕ್ಕಿಂತ ಹೆಚ್ಚು ಉಪಯೋಗಿಸುವುದರಲ್ಲಿ ಅರ್ಥ ಇದೆ ಎನ್ನತಕ್ಕಂಥದ್ದು ಮಾನ್ಯ ಆಡಳಿತ ಪಕ್ಷದ ಧುರೀಣರು ಕೂಡಾ ಒಪ್ಪಿದ್ದಾರೆ ಎನ್ನತಕ್ಕಂಥದ್ದು ಸಮಾಧಾನ ತರತಕ್ಕಂಥ ವಿಚಾರ ಆದುದರಿಂದ, ನಾನು ಈ ಸಭೆಯ ಎಲ್ಲಾ ಸದಸ್ಯರಲ್ಲಿ ಅತ್ಯಂತ ಕಳಕಳಿಯಿಂದ ಮಾಡತಕ್ಕಂಥದ್ದು ಏನೆಂದರೆ ಪ್ರಜಾಪ್ರಭುತ್ವದ ಚೌಕಟ್ಟಿಗೆ ಅನುಗುಣವಾಗಿ ಮತ್ತು ನಾವೇ ಸಮ್ಮ ಬುದ್ದಿ ಪೂರ್ವಕವಾಗಿ ಏನು ನಿಬಂಧನೆಗಳನ್ನು ರಚಿಸಿಕೊಂಡಿದ್ದೇವೆಯೋ ಆ ನಿಬಂಧನೆಗಳಿಗೆ ಅನುಸಾರವಾಗಿ ಈ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಂಡು ಮುಂದೆ ಹೋಗಬೇಕು ಮತ್ತು ಏನು ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ, ಈ ಅರ್ಥ ಪೂರ್ಣವೂ ಆಗಬೇಕು ಮತ್ತು ಪರಿಪೂರ್ಣವೂ ಆಗಬೇಕು. ಆ ದೃಷ್ಟಿಯಿಂದ ನಿನ್ನೆ ಮಾನ್ಯ ವಿರೋಧ ಪಕ್ಷಗಳ ಸದಸ್ಯರು ಸದನಕ್ಕೆ ಬಾರದೆ ಇದ್ದುದಕ್ಕೆ ಸ್ಪೀಕರ ನಾನು ಆಡಳಿತ ಪಕ್ಷದ ಸಚಿವರೊಡನೆ ನಾನೂ ಸಂಸದೀಯ ಸಚಿವರ ಜೊತೆಯಲ್ಲಿ ಮುಖ್ಯಮಂತ್ರಿಗಳ ಹಿರಿಯ ಸದಸ್ಯರುಗಳ ಜೊತೆಯಲ್ಲಿ ಮಾತನಾಡಿದ್ದೇನೆ. ನಿನ್ನೆ ಮತ್ತು ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ರಾಜಕೀಯ ಪಕ್ಷಗಳ ಪ್ರಮುಖರು ನನ್ನನ್ನು ಭೇಟಿ ಮಾಡಿ ಈ ಒಂದು ಅಹಿತಯ, ಕಹಿ ಪ್ರಸಂಗಕ್ಕೆ ವಿದಾಯ ಹೇಳಿರುವುದರಿಂದ ಮತ್ತೊಮ್ಮೆ ನಮ್ಮ ಈ ಸದನದ ಕಲಾಪಗಳನ್ನು ಪ್ರಾರಂಭಿಸೋಣ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ತಾವೇ ಹೇಳಿರುವ ಹಾಗೆ. ದುರದೃಷ್ಟಕರ ಬೆಳವಣಿಗೆ ಅದೃಷ್ಟವಶಾತ್ ಸುಖಾಂತವಾಗಿ ಕೊನೆಗೊಂಡಿದೆ. ಇದಕ್ಕಾಗಿ ತಮ್ಮನ್ನು ನಾನೂ ಸಮಸ್ಯೆಯನ್ನು ಬಿಡಿಸುವಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದ ಅನೇಕ ಹಿರಿಯ ಸದಸ್ಯರನ್ನು ಮತ್ತು ಸರ್ಕಾರದ ಪಕ್ಷದ ನಾಯಕರನ್ನು ನಾನು ಈ ಮೂಲಕ ಅಭಿನಂದಿಸುತ್ತೇನೆ. ಹೀಗೆ ಹೇಳುವಾಗ ಎರಡು ವಿಚಾರಗಳನ್ನು ನಾನು ವಿರೋಧ ಪಕ್ಷದ ನಾಯಕನಾಗಿ ಸ್ಪಷ್ಟಪಡಿಸ

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬೇಕು. ಮೊದಲನೆಯದು, ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ನಿನ್ನೆ ಸದನದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಸಭಾತ್ಯಾಗ ಮಾಡಿದ ವಿಚಾರ ನಮಗೆ ಇನ್ನೂ ನಿಗೂಢವಾಗಿಯೇ ಇದೆ ಎಂದು ಹೇಳಿದ್ದಾರೆ. ಇವನ್ನೇ ಎರಡು ಭಾಗವಾಗಿ ವಿಂಗಡಣೆ ಮಾಡಬೇಕು. ಒಂದು ಸಭಾತ್ಯಾಗ ಮತ್ತೊಂದು ಬಹಿಷ್ಕಾರ. ಸಭಾತ್ಯಾಗ ಮೊನ್ನೆ ಮಾಡಿದಾಗ ತಾವು ಹೇಳಿದ ಹಾಗೆ, ವಿರೋಧ ಪಕ್ಷಗಳಿಗೆ ಕಾಲಮಿತಿಯಲ್ಲಿ ಕೆಲಸ ಮಾಡಬೇಕು ಎನ್ನುವ ವಿಶ್ವಾಸ ಇದ್ದರೂ ಬೇಡಿಕೆಗಳ ಚರ್ಚೆ ಬಂದಾಗ ಸ್ವಲ್ಪ ವ್ಯಾಪ್ತಿಯನ್ನು ಮೀರಿದರೂ ಅದನ್ನು ತಾವು ಸಹಿಸುತ್ತೀರಿ ಎಂದು ಹೇಳಿ, ತಾವೇ ಆದೇಶ ಕೊಟ್ಟಿದ್ದೀರಿ. ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆ ಕಾರಣ ಸಭಾತ್ಯಾಗ ಮಾಡಿದ್ದೇವೆ. ಆದರೆ ನಿನ್ನೆ ಈ ವಿಚಾರವನ್ನು ಚರ್ಚೆ ಮಾಡುವುದಕ್ಕಾಗಿ ಸಂಸದೀಯ ವ್ಯವಹಾರ ಮಂತ್ರಿಗಳು ಮತ್ತು ತಾವು ತಮ್ಮ ಕೊಠಡಿಗೆ ನನ್ನನ್ನು ಆಹ್ವಾನಿಸಿದ್ದಿರಿ. ಈ ಆಹ್ವಾನವನ್ನು ನಾವು ಸಂತೋಷದಿಂದ ಅಂಗೀಕರಿಸಿ ಚರ್ಚೆಗೋಸ್ಕರ ಬಂದೆವು. ಆಗ ನಡೆದ ಪ್ರಕರಣಗಳನ್ನು ನಾನು ಇಲ್ಲಿ ವಿಸ್ತಾರವಾಗಿ ಪ್ರಸ್ತಾಪ ಮಾಡುವುದು ಅನಾವಶ್ಯಕವಾಗಬಹುದು. ಆದರೆ ನಾವು ಬೆರುವಲ್ಲಿ ಸಭೆ ಪ್ರಾರಂಭ ಆಗಿತ್ತು. ನನ್ನ ಕೊಠಡಿಯಲ್ಲಿ ಪುನಃ ಹೋಗಿ ಸಭೆ ಸೇರಿ ಚರ್ಚೆ ಮಾಡುತ್ತಿದ್ದೆವು. ಸದನದಲ್ಲಿ ಪ್ರಶ್ನೋತ್ತರ ಕಾಲ ಮುಗಿದು ಸಭೆಯ ಕಲಾಪ ಪ್ರಾರಂಭ ಆಯಿತು. ಆಗ ನಮ್ಮಲ್ಲಿ ತಪ್ಪೋ ಅಥವಾ ಸರಿಯೋ ಒಂದು ನಿರ್ಣಯವನ್ನು ಮಾಡಬೇಕಾಯಿತು. ವಿರೋಧ ಪಕ್ಷದವನ್ನು ಹೊರಗೆ ಇಟ್ಟೋ ಸಭೆಯನ್ನು ನಡೆಸತಕ್ಕ ತೀರ್ಮಾನಕ್ಕೆ ಸರ್ಕಾರ ಬಂದಿದೆಯೇನೊ ಎನ್ನುವ ಶಂಕೆ ನಮಗೆ ಬಂತು. ಆ ಕಾರಣಕ್ಕಾಗಿ ಒಂದು ಪತ್ರಿಕಾ ಹೇಳಿಕೆಯನ್ನು ಹೇಳಿ ಸಭೆಗೆ ಬಹಿಷ್ಕಾರವನ್ನು ಹಾಕತಕ್ಕಂಥ ಎರಡನೇ ಭಾಗಕ್ಕೆ ನಾವು ಬರಬೇಕಾಯಿತು. ಇದು ಆದ ನಂತರ ನಡೆದ ಚರ್ಚೆಯ ವಿವರವನ್ನು ತಾವು ಹೇಳಿದ್ದೀರಿ. ಆದರಿಂದ ಇದು ನಿಗೂಢವಾಗಿಯೂ ನಮಗೆ ಮೊಸರಿನಲ್ಲಿ ಕಲ್ಲೂ ಸಿಕ್ಕಲಿಲ್ಲ. ಪರಿಸ್ಥಿತಿ ನಮ್ಮನ್ನು ಅಲ್ಲಿಗೆ ಹಬ್ಬಿತು, ಅದಕ್ಕಾಗಿ ತಮ್ಮ ಕೊಠಡಿಯಲ್ಲಿ ವಿಸ್ತಾರವಾಗಿ ವಿಚಾರವನ್ನು ತಮ್ಮ ಮುಂದೆ ಇಟ್ಟಿದ್ದೇವೆ ಪ್ರಸ್ತಾಪ ಮಾಡಿದ್ದೇವೆ. ಆದರೆ ಒಂದು ಮಾತನ್ನು ನಾನು ಇಲ್ಲಿ ಹೇಳಿದರೆ ಅದು ಪ್ರಸ್ತುತ ಆಗುವುದಿಲ್ಲ ಎಂದು ಭಾವನೆ ಮಾಡಿ ಹೇಳುತ್ತೇನೆ. ಬಹುಶಃ ಅಪಾರ ಸಂಖ್ಯೆಯ ಅಕ್ಷಹಿಣಿ ಸೈನ್ಯದ ಅಹಂಭಾವವೇ ಕಾರುಕುಲದ ನಾಶಕ್ಕೆ ಕಾರಣ ಆಯಿತು ಎನ್ನುವುದು ಮಹಾ ಭಾರತದ ಸಂದೇಶ ಅದು ಅಂದಿಗೂ ಇಂದಿಗೂ ಸರ್ವಕಾಲಿಕ, ಸರ್ವ ಮಾನ್ಯ.

ಶ್ರೀ ಟಿ. ಎಂ. ಮಂಜುನಾಥ್.—ಮಹಾ ಭಾರತ ಯುದ್ಧ ಈಗ ಶುರು ಆಯಿತು.

ಶ್ರೀ ಡಿ. ಬಿ. ಚಂದ್ರೇಗೌಡ.—ಅದು ಅಂದಿಗೂ, ಇಂದಿಗೂ ಸರ್ವ ಕಾಲಿಕ ಸರ್ವ ಮಾನ್ಯ.....

ಅಧ್ಯಕ್ಷರು.—ಇಲ್ಲ ಮಹಾ ಭಾರತ ನಾಳೆ ಬೆಳ್ಳಿಗ್ಗೆ ಮುಕ್ತಾಯ ಆಗುತ್ತದೆ

ಶ್ರೀ ಡಿ. ಬಿ. ಚಂದ್ರೇಗೌಡ.—ನಾಳೆ ಅದನ್ನು ಮುಗಿಸುವುದಕ್ಕೆ ಹೊರಟಿದ್ದೇವೆ. ಆದ್ದರಿಂದ ಈ ಸರ್ವ ಮಾನ್ಯ ಹಾಗೂ ಸರ್ವಕಾಲಿಕವಾದ ಸತ್ಯವನ್ನು ಅವರೂ ಒಪ್ಪಿಕೊಂಡಿದ್ದಾರೆ. ಅದು ನನಗೆ ಸಂತೋಷವನ್ನು ತಂದಿದೆ. ಮುಖ್ಯವಾಗಿ ನಮಗೆ ಇಲ್ಲಿ ಮಾತನಾಡಬೇಕು ಎನ್ನುವ ಬರೀ ಅಪೇಕ್ಷೆಯಿಂದಾಗಲ್ಲಿ ಪ್ರಸಿದ್ಧಿಗೋಸ್ಕರವಾಗಲಿ ಮಾತನಾಡಬೇಕು ಎಂದು ಅಲ್ಲ ಸಂಖ್ಯೆಯ ಆಧಾರದ ಮೇಲೆ ಜನ ತಂತ್ರವನ್ನು ನಡೆಸುವುದು ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಅನಿಸಿಕೆಗಳನ್ನು ಹೇಳತಕ್ಕಂಥ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡತಕ್ಕಂಥ ಜನ್ಮಾಭಿಪ್ರಾಯವನ್ನು ಪ್ರತಿಭಿಂಬಿಸತಕ್ಕಂಥ ಸರ್ಕಾರದ ತಪ್ಪು ಒಪ್ಪುಗಳನ್ನು ಎತ್ತಿ ಹಿಡಿಯತಕ್ಕಂಥಾ ಈಕೆಲಸ ಮಾಡಾವ ಜವಾಬ್ದಾರಿಯನ್ನು ಕನ್ನಡ ನಾಡಿನ ಜನ ನಮಗೆ ಏನು ಬಹಿಸಿದ್ದಾರೆ, ಅದು ನಿಷ್ಪಕ್ಷಪಾತವಾಗಿ, ಪ್ರಾಮಾಣಿಕವಾಗಿ ಈ ಸದನದಲ್ಲಿ ನಡೆಯಬೇಕು ಎನ್ನತಕ್ಕ ಸದಿಚ್ಛೆಯನ್ನು ತಾವು ವ್ಯಕ್ತ ಮಾಡಿದ್ದೀರಿ, ಅದಕ್ಕಾಗಿ ಎಲ್ಲಾ ವಿರೋಧ ಪಕ್ಷಗಳ ವತಿಯಿಂದ ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ. ಈ ಸುಖಾಂತವಾಗಿ ಮುಗಿದಿರತಕ್ಕ ಪ್ರಸಂಗವನ್ನು ಮತ್ತೆ ಮತ್ತೆ ಪ್ರಸ್ತಾಪ ಮಾಡಿ ಸದನದ ಸಮಯವನ್ನು ವ್ಯರ್ಥ ಮಾಡುವುದಕ್ಕೆ ನನಗೆ ಇಚ್ಛೆ ಇಲ್ಲ. ಆದಕ್ಕಾಗಿ ತಮಗೂ, ಹಿರಿಯ ಸದಸ್ಯರಿಗೂ ಈ ಒಂದು ಜನತಾಂತ್ರಿಕ ಪರಂಪರೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಪ್ರಯತ್ನಿಸಿದ ಎಲ್ಲಾ ಸದಸ್ಯರಿಗೂ ಅಭಿನಂದನೆಗಳನ್ನು ಸಮರ್ಪಣೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ನಿನ್ನೆ ಮತ್ತು ಮೊನ್ನೆ ಸದನದಲ್ಲಿ ಏನು ಕೆಲವು ಭಿನ್ನಾಭಿಪ್ರಾಯಗಳಿಂದ ಕೆಲವು ವಾತಾವರಣ ಸೃಷ್ಟಿಯಾಗಿತ್ತು, ಆದು ತಮ್ಮ ಮಧ್ಯಸ್ಥಿಕೆಯಿಂದ ನಿನ್ನೆ ಮತ್ತು ಇವೊತ್ತು ಮಾತುಕತೆ ಮಾಡಿ ವಾತಾವರಣ ತಿಳಿ ಆಗಿದೆ. ತಿಳಿಯಾದಂಥ ವಾತಾವರಣ ಏನಿದೆ ಅದು ಸದಾ ತಿಳಿಯಾಗಿಯೇ ಇರಲಿ, ಪರಸ್ಪರ ಅರಿತು ನಾವು ಮುಂದಿನ ಕಾರ್ಯ ಕ್ರಮಗಳನ್ನು ನಡೆಸೋಣ. ಒಂದು ವಿಚಾರವನ್ನು

ಈ ಸದನದಲ್ಲಿ ನಮ್ಮ ಸರ್ಕಾರದ ಪರವಾಗಿ ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸಂಖ್ಯೆಯ ಬಲದಿಂದ ಯಾವುದೇ ರೀತಿಯ ಒಂದು ಪ್ರಾಬಲ್ಯವನ್ನು ಈ ಸದನದಲ್ಲಿ ಬೆಳೆಸಿಕೊಳ್ಳುವುದಕ್ಕೆ ನಾವು ಇಚ್ಛಿಪಡುವುದಿಲ್ಲ. ಯಾವಾಗಲೂ ಕೂಡ ಚರ್ಚೆಯಲ್ಲಿ ಸಮಯದ ಅವಕಾಶ ಇರಲಿ ಅಥವಾ ಯಾವುದೇ ವಿಚಾರ ಇರಲಿ ವಿರೋಧ ಪಕ್ಷದವರ ಸಂಪೂರ್ಣವಾದಂಥ ವಿಶ್ವಾಸವನ್ನು ಪೂರಕವಾದಂತಹ ಅವರ ಬೆಂಬಲವನ್ನು ಕಟ್ಟಿಕೊಂಡೇ ಈ ಸದನದ ಕಾರ್ಯಕಲಾಪವನ್ನು ನಡೆಸಿಕೊಂಡು ಹೋಗತಕ್ಕ ಒಂದು ಕೇಲಸವನ್ನು ಈ ಕಡೆಯಿಂದ ನಾವು ಮಾಡಲಿಕ್ಕೆ ಯಾವಾಗಲೂ ಸಿದ್ಧರಿದ್ದೇವೆ ಎಂದು ಹೇಳುತ್ತೇನೆ. ಬಹುಶಃ ಮಹಾ ಭಾರತದ ಅಧ್ಯಾಯ ಮುಗಿದಿದೆ. ಶಾಂತಿ ನೆಮ್ಮದಿ ನೆಲೆಸಿದೆ, ಆದ್ದರಿಂದ ಈ ವಾತಾವರಣದಲ್ಲಿ ನಮ್ಮ ಕಾರ್ಯಕಲಾಪವನ್ನು ನಡೆಸೋಣ. ಆದಕ್ಕೆ ಸಹಕಾರಯಾದಂತಹ ನಮ್ಮ ವಿರೋಧ ಪಕ್ಷದ ಎಲ್ಲಾ ಹಿರಿಯ ನಾಯಕರಿಗೂ ಮತ್ತು ವಿಶೇಷವಾಗಿ ಮಧ್ಯಸ್ಥಿಕೆಯನ್ನು ವಹಿಸಿ ಇಂತಹ ಒಂದು ತಿಳಿಯಾದ ವಾತಾವರಣವನ್ನು ಸೃಷ್ಟಿಸಲಿಕ್ಕೆ ತಾವು ನಿನ್ನೆ ಮತ್ತು ಇವತ್ತು ಏನು ಪ್ರಯತ್ನ ಮಾಡಿದ್ದೀರಿ, ಅದಕ್ಕಾಗಿ ನಾನು ವಿಶೇಷವಾಗಿ ತಮಗೆ ಎಂದೆನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).**—ಮಾನ್ಯ ಅಧ್ಯಕ್ಷರೆ, ಒಂದು ಮಾತು, ತಮ್ಮ ಮಾತನ್ನು ನಾನು ಅನುಮೋದಿಸುತ್ತೇನೆ. ಮೊನ್ನೆಯ ದಿವಸ ಈ ಸಭೆಯಲ್ಲಿ ಬಹಳ ಗಂಭೀರ ವಾದಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಅನೇಕರು ಇಲ್ಲಿ ತಿಳಿಯಾದ ವಾತಾವರಣ ತರುವುದಕ್ಕೆ ಸಮಗ್ರವಾಗಿ ಪ್ರಯತ್ನ ಪಟ್ಟರು, ಪ್ರಪ್ರಥಮವಾಗಿ ಈ ಸಭೆಯಲ್ಲಿ ಕಾಲಾವಕಾಶಕ್ಕಾಗಿ ನಾವು ಏನು ಒತ್ತಾಯ ತಂದೆವೊ ಆ ಒತ್ತಾಯ ಅಧ್ಯಕ್ಷರ ವಿರುದ್ಧ ಅಲ್ಲ. ಅಧ್ಯಕ್ಷರ ವಿರುದ್ಧವಾಗಿ ಸಭೆಯಿಂದ ಹೊರಗಡೆ ಹೋದರು ಎನ್ನತಕ್ಕಂಥ ಮಾತು ನಾವು ಹೋದನಂತರ ಇಲ್ಲಿ ಬಂತು. ಅಧ್ಯಕ್ಷರ ವಿರುದ್ಧ ಎಂದೆಂದೂ ಅಲ್ಲ ಮಾನ್ಯ ಅಧ್ಯಕ್ಷರಿಗೆ ಪ್ರಾಮಾಣಿಕವಾದಂಥ ಗೌರವವನ್ನು ಕೂಡುವುದರಲ್ಲಿ ನಾವೆಲ್ಲರೂ ಮೊದಲಿಗರಾಗಿದ್ದೇವೆ, ಆದರಲ್ಲಿ ಎರಡನೇ ಪ್ರಶ್ನೆಯಿಲ್ಲ. ಸಂಧಾನದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪ ನವರು ಬಂದಿದ್ದರು, ಮಾನ್ಯ ಮಲ್ಲಾರಿಗೌಡ ಪಾಟೀಲರು ಬಂದಿದ್ದರು, ಮತ್ತು ಮಾನ್ಯ ಮಂಜುನಾಥ ರವರೂ ಬಂದಿದ್ದರು. ಅವತ್ತೇ ಒಂದು ನಿರ್ಣಯ ಆಗಬೇಕಾಗಿತ್ತು. ನಾವೆಲ್ಲ ಒಂದು ಕೀರ್ಮಾನಕ್ಕೆ ಬರುವ ಮಟ್ಟದಲ್ಲಿದ್ದೆವು. ನಾವೇನು ಉದ್ದೇಶಪೂರ್ವಕವಾಗಿ ಬಹಿಷ್ಕಾರ ಮಾಡಿ ಹೊರಗಡೆ ಹೋಗಬೇಕು ಎನ್ನತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಆದರೆ ನಾವು ಬರುವುದರೊಳಗಾಗಿ ಬಾಗಿಲು ಮುಚ್ಚಿತ್ತು. ನಮ್ಮ ಸಂಧಾನದ ಬಾಗಿಲೂ ಮುಚ್ಚಿದೆಯೇನೊ ಎನ್ನುವಷ್ಟು ನಮಗೆ ಭಾಸವಾಯಿತು, ಸಭೆ ಪ್ರಾರಂಭವಾಯಿತು. ಆದರೂ ಸಹ ತಾವು ಅಧ್ಯಕ್ಷರು ತೆಗೆದುಕೊಂಡಥ ಒಂದು ನಿಲುವು ಬಹಳ ಮೆಚ್ಚತಕ್ಕಂಥಾದ್ದು. ಆದು ಒಂದು ರೀತಿಯಲ್ಲಿ ಕೃಷ್ಣಪಂಥದಾನದಲ್ಲಿ ತಾವು ಯಶಸ್ವಿಯಾಗಿದ್ದೀರಿ. ನಾನು ಈ ಸಭೆಯ ಪ್ರಾರಂಭದಲ್ಲಿ ತಮಗೆ ಹೇಳಿದ್ದೇ. ನಮ್ಮ ಮಾನ್ಯ ಗೌಡರೂ ಆ ಕಡೆ ಅಕ್ಷೋಹಿಣಿ ಸೈನ್ಯ ಇದೆ ಎಂದು ಹೇಳಿದರು. ನಿಜ, ನಾನಂ ಕೌರವರು ಎಂದಾ ಆಗಲೇ ಹೇಳಿದ್ದೆ. ನಮ್ಮ ಪರವಾಗಿ ಯಾವತ್ತೂ ಕೃಷ್ಣನ ದೃಷ್ಟಿ ಇರಬೇಕಾದ್ದು. ತಾವು ಮದ್ದೂರು ಕೃಷ್ಣ ಆಗಬಾರದು, ಮಹಾಭಾರತದ ಕೃಷ್ಣ ಆಗಬೇಕು ಎಂದು ಹೇಳಿದ್ದೇನೆ. ನಾಳೆ ಮಹಾಭಾರತ ಮುಗಿದರೂ ಈ ಸಭೆ ನಿರಂತರವಾಗಿರುವುದರಿಂದ ತಾವು ಕೃಷ್ಣರಾಗೇ ಇರಬೇಕು. ಮಹಾಭಾರತ ಟಿ. ವಿ. ಯಲ್ಲಿ ಮುಗಿಯಬಹುದು. ಆದರೆ ಈ ಸಭೆಯಲ್ಲಿ ಮಹಾಭಾರತ ಇದ್ದೇ ಇರುತ್ತದೆ. ಆದುದರಿಂದ ತಾವು ದಯಮಾಡಿ ಕೃಷ್ಣನ ರೂಪದಲ್ಲಿದ್ದು ನಮಗೆ ರಕ್ಷಣೆ ಕೊಡಬೇಕೆಂದು ಹೇಳಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಇವತ್ತು ತಾವು ಪ್ರಜಾ ಪ್ರಭುತ್ವವನ್ನು ಎತ್ತಿಹಿಡಿದು ಸಂಧಾನ ಮಾಡಿದಿರಿ. ತಮ್ಮ ಕಾರ್ಯಾಲಯದಲ್ಲಿ ವಿರೋಧಪಕ್ಷದವರನ್ನು, ಭಾರತೀಯ ಜನತಾಪಕ್ಷದವರನ್ನು, ಜನತಾಪಕ್ಷದವರನ್ನು, ರೈತ ಸಂಘದವರನ್ನು, ನಮ್ಮನ್ನು ಮತ್ತು ಜನತಾದಳದವರನ್ನು ಎಲ್ಲರನ್ನೂ ಕರೆದಿರಿ. ಇವತ್ತು ನಿಜವಾಗಲೂ ಮಾನ್ಯ ಪಿ. ಜಿ. ಆರ್. ಸಿಂಧ್ಯ ರವರನ್ನು, ಚಂದ್ರೇಗೌಡರನ್ನು, ಯಡಿಯೂರಪ್ಪರವರನ್ನು, ಬೈರೇಗೌಡರನ್ನು, ಬಾಪೂಗೌಡ ಪಾಟೀಲರನ್ನು ರೈತ ಸಂಘದ ನಂಜುಂಡಸ್ವಾಮಿಯವರನ್ನು ಎಲ್ಲರನ್ನೂ ತಾವು ಕರೆದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಸಚಿವರಾದ ಬಸವಲಿಂಗಪ್ಪನವರು ಮತ್ತು ಮೊಯ್ಲಿಯವರೂ ಬಂದರು. ಮೊಯ್ಲಿಯವರು ಇಲ್ಲಿ ಬಂದು ಹೇಳುತ್ತಾರೆ, ಅಲ್ಲಿ ಒಂದು ಹೇಳುತ್ತಾರೆ ಅದು ಬಹಳ ಬಹಳವಾಗಿವೆ. ಏಕೆಂದರೆ, ಅವರು ಅಲ್ಲಿ ಬಹಳ ಸೌಮ್ಯವಾಗಿ ಗಂಭೀರವಾಗಿ ಬಣ್ಣನೆಯಲ್ಲಿ ಕೂದಲು ತಗೆಯುವ ರೀತಿಯಲ್ಲಿ ಮಾತನಾಡುತ್ತಾರೆ. ಈ ಸಭೆಗೆ ಬಂದತಕ್ಷಣ ಅದೇನು ಅವತಾರ ಬದಲಾವಣೆಯಾಗುತ್ತದೊ ಅವರದು.....

ಅಧ್ಯಕ್ಷರು.—ಇಲ್ಲೂ ಸೌಮ್ಯವಾಗಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲ, ನಿನ್ನೆ ಮಾತನಾಡುವಾಗ ಅವರು ಏನು ಹೇಳಿದರು ಎನ್ನುವುದು ತಮಗೆ ಗೊತ್ತಿದೆ. ಏಕೆಂದರೆ, ಅವರು ಮೊಸರಿನಲ್ಲಿ ಕಲ್ಲು ಹುಡುಕುವುದಕ್ಕೆ ಹೋಗಿದ್ದರು ಅಂದರು. ನಾವು ಕಲ್ಲು ಗಿಲ್ಲು ಹುಡುಕುವುದಕ್ಕೆ ಹೋಗಲಿಲ್ಲ. ಇದುವರೆಗೆ ನಮಗೆ ಮೊಸರಿನಲ್ಲಿ ಕಲ್ಲು ಸಿಕ್ಕಿಲ್ಲ. ಆದುದರಿಂದ ತಾವು ಈ ಒಂದು ನಿಲುವನ್ನು ತೆಗೆದುಕೊಂಡು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವುದರಲ್ಲಿ ಆಪಾರವಾದಂಥ ಬೆಲೆಯನ್ನು ಕೊಟ್ಟಿದ್ದೀರಿ ಎಂದು ಹೇಳಿ, ತಮ್ಮ ನಿಲುವನ್ನು ನಾವು ಸಂಪೂರ್ಣವಾಗಿ ಅಭಿನಂದಿಸುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಅವರು ಕೃಷ್ಣನ ರಕ್ಷಣೆ ಇರಬೇಕು ಎಂದು ಹೇಳುತ್ತಾರಲ್ಲ, ಮಹಾಭಾರತದಲ್ಲಿ ಕೌರವರಿಗೆ ಕೃಷ್ಣ ರಕ್ಷಣೆ ಕೊಟ್ಟಿದ್ದನ್ನು ನಾವು ನೋಡಲಿಲ್ಲ. ಆದುದರಿಂದ ಅವರು ಪಾಂಡವರ ಪಾತ್ರ ವಹಿಸಿದರೆ ರಕ್ಷಣೆ ಕೊಡಬಹುದು, ಕೌರವರ ಪಾತ್ರವೇ ವಹಿಸುತ್ತಾ ಇದ್ದರೆ ಹೇಗೆ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ನಿನ್ನೆ ಶ್ರೀಮಾನ್ ಹನುಮೇ ಗೌಡರ ಭಾಷಣ ಮುಗಿದಿತ್ತು ಎಂದು ನಾನು ಭಾವನೆ ಮಾಡುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

(ಸಣ್ಣ ನೀರಾವರಿ, ನೀರಾವರಿ ಜಲಸಂಚಾರ, ಒಳ ಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ಲೋಕೋಪಯೋಗಿ ಕಾಮಗಾರಿಗಳು (ನಿರ್ವಾಣ ಹೊರತು), ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು)

† ಶ್ರೀ ಕೆ. ಹೆಚ್, ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಒಂದೆರಡು ಪಾಯಿಂಟ್ಸ್ ಹೇಳುವುದಿತ್ತು. ಅದನ್ನು ಹೇಳಿಬಿಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಬರಗಾಲ ಪ್ರದೇಶದಿಂದ ಬಂದವನು, ಜನರು ನನಗೆ ಮತಗಳನ್ನು ಕೊಟ್ಟಿದ್ದಾರೆ. ಮಲೆನಾಡು ಹೋಯಿತು. ನಾನು ಚಿಕ್ಕ ವಯಸ್ಸಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಾ ಇದ್ದಾಗ ೧೯೭೭–೭೮ನೇ ಇಸವಿಯಲ್ಲಿ ೪೫–೫೦ ಇಂಚು ಮಳೆಯಾಗುತ್ತಿತ್ತು. ಇವತ್ತು ೧೦–೧೨ ಇಂಚು ಕೂಡ ಮಳೆಯಾಗುತ್ತಾ ಇಲ್ಲ. ಕಳೆದ ೫–೬ ವರ್ಷಗಳಿಂದ ನಿರಂತರವಾಗಿ ಬರಗಾಲ ಬರುತ್ತಾ ಇದೆ. ಜನರ ಹತ್ತಿರ ಇದ್ದದ್ದನ್ನೆಲ್ಲ ನುಂಗ್ಸಿಗೆ ಮಾಡಿ ಇವತ್ತು ಜೀವನ ನಡೆಸುವುದು ಬಹಳ ಕಷ್ಟದ ಪರಿಸ್ಥಿತಿಗೆ ಬಂದಿದೆ. ಸಾವಿರಾರು ಜನ ಪಶ್ಚಿಮ ಘಟ್ಟಗಳಿಗೆ, ಕಾಫಿ ತೋಟಗಳಿಗೆ ಕೂಲಿಗೆ ಹೋಗುವಂಥ ದೃಶ್ಯವನ್ನು ಕಣ್ಣಾರೆ ನೋಡಿದಾಗ ಎಂತಹವರಿಗೂ ಕರುಳು ಕಿತ್ತು ಬರುತ್ತದೆ. ಆ ಜನರು ತಮ್ಮ ಮನೆ ಮಠ ಬಿಟ್ಟು, ತಮ್ಮಲ್ಲಿದ್ದಂಥ ಪ್ರಾಣಿಗಳನ್ನೂ ಕೂಡ ಮಾರಿ ಇದ್ದ ಒದ್ದ ಸ್ವಲ್ಪ ಸಾಮಾನುಗಳನ್ನು ಹೊತ್ತುಕೊಂಡು ಕೂಲಿ ಕೆಲಸಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈಗಿನ ವಾತಾವರಣವನ್ನು ನೋಡಿದರೆ ಇನ್ನು ಮೇಲೆ ಮಳೆ ಹೀಗೆ ಆಗುತ್ತದೇನೊ ಎಂದು ನನಗೆ ಅನಿಸುತ್ತಾ ಇದೆ. ಹಿಂದೆ ನಾನು ವ್ಯವಸಾಯ ಮಾಡುತ್ತಾ ಇದ್ದೆ. ೧೦ ವರ್ಷಗಳ ಹಿಂದೆ ಒಂದಾಸಲಕ್ಕೆ ನಾಳೆಗಾಲದಲ್ಲಿ ೪–೫ ಸಲ ಡಿಪ್ರೆಷನ್ ಬಂಗಾಳ ಕೊಲ್ಲಿಯಲ್ಲಿ ಆಗುತ್ತಿತ್ತು. ಬಂಗಾಳ ಕೊಲ್ಲಿಯಲ್ಲಿ ಡಿಪ್ರೆಷನ್ ಆದಾಗ ಮೈಸೂರಿಗೆ ಅಂದರೆ ಪ್ರಮುಖವಾಗಿ ಕರ್ನಾಟಕದಲ್ಲಿ ಮಳೆ ಆಗೇ ಆಗುವುದು.

ಕಳೆದ ೪–೫ ವರ್ಷಗಳಿಂದ ಏನು ದುರಾದೃಷ್ಟವೊ ಏನೋ ಡಿಪ್ರೆಷನ್ ಕೂಡ ಆಗುತ್ತಿಲ್ಲ. ಮುಂಗಾರಾಗಲೀ, ಹಿಂಗಾರಾಗಲೀ ಸಕಾಲದಲ್ಲಿ ಬರುತ್ತಿಲ್ಲ. ಕೆಲವು ನೀರಾವರಿ ಜಾಗಗಳನ್ನು ಬಿಟ್ಟರೆ ಅಂಕ ಪ್ರದೇಶ ಬೆಂಗಾಡು ಪ್ರದೇಶವಾಗಿ ಪರಿವರ್ತನೆಯಾಗಿದೆ. ಕೆಲವು ತಜ್ಞರು ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ೬೦೦ ಟಿ. ಎಂ. ಸಿ. ನೀರು ಹರಿದುಹೋಗುತ್ತದೆ ಎಂದು ಹೇಳುತ್ತಾರೆ ಮತ್ತೆ ಕೆಲವರು ೨೯೦೦ ಟಿ ಎಂ. ಸಿ ನೀರು ಹರಿದು ಹೋಗುತ್ತದೆಂದು ಹೇಳುತ್ತಾರೆ. ಹಿಂದೆ ಇದ್ದು ಈಗ ರಿಟೈರ್ಡ್ ಆಗಿರುವ ಥರ್ತಜ್ಞ ಇಂಜಿನಿಯರ್ ಬಬ್ಬರು ವೀರಾವಿ ಒಬ್ಬರು, ಪಶ್ಚಿಮ ಘಟ್ಟದಲ್ಲಿ ಹೆಚ್ಚು ಮಳೆಯಾಗಿ ಅರಬ್ಬಿ ಸಮುದ್ರಕ್ಕೆ ಹೋಗುತ್ತಕ್ಕಂಥ ಸುಮಾರು ೨೦೦ ಟಿ. ಎಂ. ಸಿ. ಯಷ್ಟು ನೀರನ್ನು ಕೃಷ್ಣಾ ಕಣಿವೆಗೆ ಏಕಾನಮಿಕಲ್ಲಾಗಿ ಪೂರ್ವಭಾಗಕ್ಕೆ ಹರಿಸಬಹುದು. ಹೀಗೆ ಹರಿಸುವುದರಿಂದ ನಿರಂತರವಾಗಿ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಹಾಗು ಮೈಸೂರು ಜಿಲ್ಲೆಗಳಲ್ಲಿ ಮಳೆ ನೆರೆಯ ಪ್ರದೇಶ ಎನಿದೆ, ರೈನಿ ಷಾಡೋ ಏರಿಯಾ ಏನಿದೆ ಆ ಭಾಗದ ರೈತರಿಗೆ, ಜನರಿಗೆ ನೀರನ್ನು ಕೊಡಬಹುದು. ಅವರನ್ನು ಕ್ಷೇವಾದ ದವಡೆಯಿಂದ ಬಿಡುಗಡೆ ಮಾಡಿ ಅವರಿಗೆ ಶಾಶ್ವತವಾದ ಪರಿಹಾರ ಒದಗಿಸಬಹುದು ಎನ್ನುವ ಅಭಿಪ್ರಾಯವನ್ನು ಕೊಟ್ಟಿರೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ,